ಇಲ್ಲಿನ ಸದಸ್ಯರ ಬಗ್ಗೆ ಹೆಸರಿಟ್ಟು ಹೇಳುವುದೂ ತಪ್ಪು. ತಾವು ಹೇಳಿದ ಹಾಗೆ ಸಂಘದ ಅಧ್ಯಕ್ಷರು ಎಂದು ಬೇಕಾಗಿದ್ದರೆ ಹೇಳಬಹುದಾಗಿತ್ತು; ಇಲ್ಲಿ ಇದು ನಡೆದಿದೆ. I will go through Kaul and Shakdher. I will definitely write a letter to the Chairman of the Upper House as early as possible; within a week. I am going to write a letter to avoid such occasions in future.

ವಿಷಯ: (ii) ಮೈಸೂರು ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

+ ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಮೈಸೂರು ಮಹಾನಗರದಲ್ಲಿ ಕಳೆದ ವರ್ಷ ನೀರಿನ ಹಾಹಾಕಾರ ಆಗಿ ಸುಮಾರು 15 ದಿನಗಳ ಕಾಲ ಇಡೀ ರಾಜ್ಯದ ಗಮನವನ್ನು ಸೆಳೆಯುವಂತಹ ಒಂದು ವ್ಯವಸ್ಥೆ ಆಗಿತ್ತು. ಕಾರಣ ಎಂದರೆ ಕಳೆದ ಬಾರಿ ಏಪ್ರಿಲ್ ಕೊನೆ ಮತ್ತು ಮೇ ಮೊದಲನೇ ವಾರದಲ್ಲಿ ನೀರು ಕೆ.ಆರ್.ಎಸ್.ನಲ್ಲಿ 72 ಅಡಿಗಳಿಗೆ ಬಂದು ಅಲ್ಲಿ ದೇವಸ್ಥಾನ ಕೂಡ ಕಾಣುವಂತಹ ಪರಿಸ್ಥಿತಿ ನಿರ್ಮಾಣ ಆಗಿತ್ತು. ಈ ವರ್ಷ ಕೂಡ ಕಳೆದ ವರ್ಷಕ್ಕೆ ಹೋಲಿಕೆಯನ್ನು ಮಾಡಿಕೊಂಡರೆ, ಕಳೆದ ವರ್ಷ ಮಾರ್ಚ್ 31ನೇ ತಾರೀಖು 92 ಅಡಿ ಇತ್ತು. ಈಗ ಇನ್ನೂ ಕೆಳಗೆ ಹೋಗುವಂತಹ ಸ್ಥಿತಿ ನಿರ್ಮಾಣ ಆಗಿದೆ. ಹೀಗಿರುವಂತಹ ಸಂದರ್ಭದಲ್ಲಿ ಕಳೆದ ಬಾರಿ ಇದಕ್ಕೆ ಸಂಬಂಧಪಟ್ಟಹಾಗೆ ಮೈಸೂರು ಮಹಾನಗರದಲ್ಲಿ ಸುಮಾರು 35 ಎಂಜಿಡಿ ನೀರಿನ ಅವಶ್ಯಕತೆ ಇದೆ. ಅಲ್ಲಿ ವಿಶೇಷವಾಗಿ ಕೆ.ಆರ್.ಎಸ್‌ನಿಂದ ಬರುವಂತಹ ನಾಲೆಯಿಂದ 20 ಎಂಜಿಡಿ ನೀರನ್ನು ಡ್ರಾ ಮಾಡುವಂತಹ ವ್ಯವಸ್ಥೆಗಳನ್ನು ಬಹಳ ವರ್ಷಗಳ ಕಾಲದಿಂದ ವಿಶ್ವೇಶ್ವರಯ್ಯನವರ ಕಾಲದಿಂದಲೂ ಕೂಡ ಬಂದಿರತಕ್ಕದ್ದು. ಎರಡು ಯೂನಿಟ್‌ಗಳಲ್ಲಿ 12 ಮತ್ತು 8 ಎಂಜಿಡಿ ನೀರನ್ನು ಡ್ರಾ ಮಾ[illegible]ವಂತಹ ವ್ಯವಸ್ಥೆಗಳಿವೆ. ಕಳೆದ ಬಾರಿ ಈ ರೀತಿ ಗಲಾಟೆ ಆದಂತಹ ಸಂದರ್ಭದಲ್ಲಿ ಇಡೀ [illegible] ಮೈಸೂರು ನಗರದಲ್ಲಿ ತಲ್ಲಣ ಆದಾಗ ಜಿಲ್ಲಾ ಮಂತ್ರಿಗಳು ನಗರಾಭಿವೃದ್ಧಿ ಸಚಿವರು, ನೀರಾವರಿ ಮಂತ್ರಿಗಳೂ ಸಹ ಮೂರೂ ಜನ ಎರಡು ದಿನಗಳ ಕಾಲ ಮೈಸೂರು ನಗರದಲ್ಲಿಯೇ ಇದ್ದು ತಕ್ಷಣದಲ್ಲಿಯೇ ಒಂದು ವಾರ್‌ಫೂಟಿಂಗ್‌ನಲ್ಲಿ ಕೆಲಸವಾಗುವ ರೀತಿಯಲ್ಲಿ ಮಾಡಿ ಒಂದು ಹೊಸ ವ್ಯವಸ್ಥೆ ಆಗಿತ್ತು. ನದಿಯಿಂದ ನೇರವಾಗಿ ಐದು ಎಂಜಿಡಿ ನೀರನ್ನು ಡ್ರಾ ಮಾಡಲಿಕ್ಕೆ ಒಂದು ಎಮರ್ಜೆನ್ಸಿ ಪ್ರಾವಿಜನ್ ಅನ್ನು ಮಾಡಿದರು. ಹಾಗೆ ಪ್ರಾವಿಜನ್ ಮಾಡುವಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ಚರ್ಚೆ ಆದಂತಹ ಸಂದರ್ಭದಲ್ಲೂ ಹೇಳಿದ್ದರು. ಈ ವರ್ಷದಲ್ಲಿ ಬಂದಿರುವಂತಹ ಸ್ಕೇರ್ಸಿಟಿಯನ್ನು ನೋಡಿಕೊಂಡು ಮುಂದಿನ ವರ್ಷಕ್ಕೆ ಈ ರೀತಿ ಸಮಸ್ಯೆ ಆದ ರೀತಿಯಲ್ಲಿ ಡಿಸೆಂಬರ್ ಒಳಗೆ ಪರ್ಮನೆಂಟ್ ಸಲ್ಯೂಷನ್ ಮಾಡುವಂತಹ ವ್ಯವಸ್ಥೆಗಳನ್ನು ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದರು. ಜೊತೆಗೆ ಎಡಿಬಿ ಸ್ಕೀಮ್‌ನಲ್ಲಿ ಈಗಾಗಲೇ ಏನು ಮೇಲಾಪುರ ಯೋಜನೆಯಿಂದ ನೀರು ತರಬೇಕಾಗಿದೆ, ಅದನ್ನು ಡಿಸೆಂಬರ್ ಒಳಗೆ ಮುಗಿಸಿಕೊಡುತ್ತೇವೆಂದು ಹೇಳಿದರು. ಇವತ್ತಿನವರೆಗೂ ಕೆಲಸ ಪೂರ್ಣ ಆಗಿಲ್ಲ. ನಾನು ಆಗಲೇ ತಮಗೆ ಹೇಳಿದ ಹಾಗೆ ಇವತ್ತೂ ಸಹ 92 ಅಡಿಗೆ ನೀರು ಬಂದು ಬಿಟ್ಟಿದೆ. ಜೊತೆಗೆ ಮಂಡ್ಯ ಜಿಲ್ಲೆಯಲ್ಲಿರುವಂತಹ ರೈತರಿಗೆ ನೀರನ್ನು ಕೊಡುವಂತಹ ಅವಶ್ಯಕವಾದಂತಹ ಕರ್ತವ್ಯ ರಾಜ್ಯ ಸರ್ಕಾರದ್ದು ಇದೆ. ಅವರಿಗೂ ನೀರು ಕೊಡಬೇಕು. ಆದರೆ ನಾಳೆಯ ದಿವಸ ಮಂಡ್ಯ ಜಿಲ್ಲೆ ಮತ್ತು ಮೈಸೂರು

ಜಿಲ್ಲೆಯಲ್ಲಿ ಕಳೆದ ವರ್ಷ ಏನಾಯಿತು? ಈ ಸಮಸ್ಯೆ ಮತ್ತೆ ಉದ್ಭವ ಆಗಬಾರದು. ಅಲ್ಲಿರುವಂತಹ ರೈತರಿಗೆ ನೀರು ಕೊಡುವಂತಹ ವ್ಯವಸ್ಥೆಯೂ ಆಗಬೇಕು. ಹಾಗೆಯೇ ಮೈಸೂರು ನಗರಕ್ಕೆ ನೀರಿನ ಸರಬರಾಜು ತೊಂದರೆ ಆಗದೇ ಇರುವ ರೀತಿಯಲ್ಲಿ ಕಾರ್ಯ ಆಗಬೇಕಾದಂತಹ ಅವಶ್ಯಕತೆ ಇದೆ. ಆದರೆ ಕಳೆದ ಬಾರಿ ಸರ್ಕಾರ ತೆಗೆದುಕೊಂಡಂತಹ ಕ್ರಮದ ಪ್ರಕಾರದಲ್ಲಿ ಡಿಸೆಂಬರ್‌ವರೆಗೂ ಕೂಡ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಈ ದೃಷ್ಟಿಯಲ್ಲಿ ಈಗ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ? ಬರುತ್ತಿರುವಂತಹ ಒಂದು ತಿಂಗಳೊಳಗಡೆ ನೀರಿನ ಸಮಸ್ಯೆ ಹಾಹಾಕಾರ ಆಗುತ್ತದೆ. ವಿಶೇಷವಾಗಿ ಈ ಬಾರಿ ಬಿಸಿಲಿನ ತಾಪ ಜಾಸ್ತಿ ಇದೆ. ಅರ್ತ್ ಕ್ವೇಕ್ ಆದ ನಂತರ ಇಡೀ ರಾಜ್ಯದಲ್ಲಿ ಬಿಸಿಲಿನ ತಾಪ ಜಾಸ್ತಿ ಇರುವಾಗ ಗ್ರೌಂಡ್ ವಾಟರ್ ಲೆವೆಲ್ ಕೂಡ ಕಡಿಮೆ ಆಗಿದೆ. ನಮ್ಮಲ್ಲಿರುವಂತಹ 1031 ಬೋರ್‌ವೆಲ್‌ಗಳಲ್ಲಿ ಈಗಲೇ ಈಲ್ಡ್ ಕಡಿಮೆ ಆಗುವಂತಹ ವ್ಯವಸ್ಥೆಗಳು ಆಗುತ್ತಿವೆ. ಹೀಗಾಗಿ ಸರ್ಕಾರ ಏನು ಕ್ರಮವನ್ನು ಕೈಗೊಂಡಿದ್ದೀರಿ? ಕಳೆದ ವರ್ಷ ಏನು ಪ್ರೋಗ್ರಾಮ್ಸನ್ನು ಚಾಕೌಟ್ ಮಾಡಿದ್ದೀರಿ, ಅದಿನ್ನೂ ಇವತ್ತಿನವರೆಗೂ ಕಾರ್ಯಗತ ಆಗಿಲ್ಲ. ಇನ್ನೊಂದು ಆಶ್ಚರ್ಯದ ವಿಚಾರ. ಕಳೆದ ವರ್ಷ ಎಮರ್ಜೆನ್ಸಿಗೋಸ್ಕರವಾಗಿ ಕೊಟ್ಟಂತಹ ಹಣವನ್ನು ಇವತ್ತಿನವರೆಗೂ ಬಿಡುಗಡೆ ಮಾಡಿಲ್ಲ. ಒಂದು ಕೋಟಿ ರೂಪಾಯಿಗಳ ಹಣವನ್ನು ಕೊಡುತ್ತೇನೆಂದು ಹೇಳುವಂತಹ ಮಾತು ಏನು ಇತ್ತು, ಅದನ್ನು ಇವತ್ತಿನವರೆಗೆ ಬಿಡುಗಡೆ ಮಾಡುವಂತಹ ಕೆಲಸ ಆಗಿಲ್ಲ. ಮೈಸೂರು ಮಹಾನಗರದ ಜನತೆಗೆ ಈ ನೀರಿನ ಹಾಹಾಕಾರ ಆಗದ ರೀತಿಯಲ್ಲಿ ಹಾಗೆಯೇ ಮಂಡ್ಯ ಜಿಲ್ಲೆಯ ರೈತರಿಗೆ ಈ ಸಮಸ್ಯೆ ಉಂಟಾಗದ ರೀತಿಯಲ್ಲಿ ಸರ್ಕಾರ ಏನು ಕ್ರಮವನ್ನು ಇದುವರೆಗೆ ಕೈಗೊಂಡಿದ್ದೀರಿ ಎಂದು ಕೇಳುವುದಕ್ಕೆ ಇಚ್ಛಿಸಿದ್ದುತ್ತೇನೆ.

ಅಧ್ಯಕ್ಷರು: ಶ್ರೀ ರಾಮದಾಸ್ ಮತ್ತು ಮಾನ್ಯ ರಾಜೂಗೌಡರ ವಿಚಾರ ಇದೆ. ಅದಾದ ನಂತರ ನಾವು ಸಭೆಯನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರೋಣ. ರಾಜೂಗೌಡರದ್ದು ಶೂನ್ಯ ವೇಳೆ ವಿಚಾರ ಇದೆ, ಭೋಜನಾನಂತರ ಸಭೆ ಸೇರಿದಾಗ ಯಾವ್ಯಾವ ಸದಸ್ಯರ ವಿಚಾರ ಇದೆ ಎಲ್ಲವನ್ನೂ ತೆಗೆದುಕೊಳ್ಳುತ್ತೇವೆ. ಶೂನ್ಯ ವೇಳೆಯಲ್ಲಿ ವಿಚಾರ ಪ್ರಸ್ತಾಪ ಮಾಡಲು ಬರವಣಿಗೆಯಲ್ಲಿ ನನಗೆ ಯಾರ್ಯಾರು ಕೊಟ್ಟಿದ್ದಿರೋ ಅವರೆಲ್ಲರ ವಿಚಾರವನ್ನೂ ಬೇಕಾದರೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್ ಅವರ ವಿಚಾರವಾಗಿ ನಿನ್ನೆ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದೆ. ನನಗೂ ಅವಕಾಶ ಕೊಡಬೇಕು. ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: ನಾವು ಮಧ್ಯಾಹ್ನ ಹೇಳಿಕೆ ಮಾಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಮುನ್ಸಿ ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ ಶೂನ್ಯ ವೇಳೆಯಲ್ಲಿ ಸನ್ಮಾನ್ಯ ರಾಮದಾಸ್ ಅವರು ಮೈಸೂರು ಮಹಾನಗರದ ಕುಡಿಯುವ ನೀರಿನ ಸಮಸ್ಯೆ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಈ ರೀತಿ ಕೊಡಬಯಸುತ್ತೇನೆ.

ಮೈಸೂರು ನಗರಕ್ಕೆ ಈ ಕೆಳಕಂಡ ಮೂಲ ಸ್ಥಾವರಗಳಿಗೆ ಒಟ್ಟು 31.50 ಎಂಜಿಡಿ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಹೊಂಗಳ್ಳಿ ಎರಡನೇ ಹಂತ	8.00	ಎಂಜಿಡಿ
ಹೊಂಗಳ್ಳಿ ಮೂರನೇ ಹಂತ	12.00	ಎಂಜಿಡಿ
ಬೆಳಗೊಳ ಮೂಲ ಸ್ಥಾವರ (1ನೇ ಹಂತ)	3.5	ಎಂಜಿಡಿ
ಬೆಳಗೊಳ (ಹೊಸ ಯಂತ್ರಾಗಾರ)	8.00	ಎಂಜಿಡಿ
ಒಟ್ಟು	31.50	ಎಂಜಿಡಿ

ಈ 31.5 ಎಂಜಿಡಿ, ನೀರನ್ನು ಪ್ರತಿದಿನ ಮಹಾನಗರ ಪಾಲಿಕೆಯ 65 ವಾರ್ಡ್‌ಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ಈ ಬೇಸಿಗೆಯಲ್ಲಿ ಮೈಸೂರು ನಗರಕ್ಕೆ ಬೇಕಾಗುವ ನೀರಿನ ಸರಬರಾಜು ಮಾಡಲಾಗುತ್ತಿದೆ. ಈ ಬೇಸಿಗೆಯಲ್ಲಿ ಮೈಸೂರು ನಗರಕ್ಕೆ ಬೇಕಾಗುವ ನೀರಿನ ಪ್ರಮಾಣವನ್ನು ಕೃಷ್ಣರಾಜ ಸಾಗರ ಜಲಾಶಯದಲ್ಲಿ 75 ಅಡಿ ಮೇಲೆ ಕಾಯ್ದಿರಿಸಲು ಕೋರಲಾಗಿದ್ದು, ಅದರಂತೆ, ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ದಿನಾಂಕ 25-1-2001ರ ನಿರ್ಣಯ ಸಂಖ್ಯೆ:14ರಲ್ಲಿ ಮೈಸೂರು ನಗರಕ್ಕೆ ಕುಡಿಯುವ ನೀರಿಗೆ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳುವುದಾಗಿ ನಿರ್ಣಯಿಸಲಾಗಿದೆ. ಈ ನಿರ್ಣಯದಂತೆ ಕೃಷ್ಣರಾಜ ಸಾಗರ ಜಲಾಶಯದಲ್ಲಿ 75 ಅಡಿ ಮೇಲೆ ಕಾಯ್ದಿರಿಸಿದಲ್ಲಿ ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜುವಿನಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ. ಹಾಗೂ ಇದಲ್ಲದೇ ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ ಒಟ್ಟು 1820 ಕೊಳವೆ ಬಾವಿಗಳಿದ್ದು, ಅದರಲ್ಲಿ 520 ಕೊಳವೆ ಬಾವಿಗಳಿಗೆ ವಿದ್ಯುತ್ ರೇಚಕಗಳನ್ನು ಅಳವಡಿಸಿರುತ್ತದೆ. ಉಳಿದ 1300 ಕೊಳವೆ ಬಾವಿಗೆ ಕೈಪಂಪ್ ಅಳವಡಿಸಿದ್ದು ನಾಗರೀಕರಿಗೆ ಪ್ರತಿದಿನ ನೀರು ಸರಬರಾಜು ಮಾಡಲಾಗುತ್ತಿದೆ.

ADB ಮೇಳಾಪೂರ ಯೋಜನೆ ಕಾರ್ಯಗತಗೊಳಿಸುತ್ತಿದ್ದೇವೆ. ಅದರ ಜೊತೆಗೆ ಈಗಾಗಲೇ ನಮ್ಮ ಜಿಲ್ಲಾ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಆ ಒಂದು ಸಮಸ್ಯೆಯನ್ನು ಯಾವ ರೀತಿ ಈಡೇರಿಸಬೇಕು, ಆ ರೀತಿ ತೊಂದರೆ ಆಗದ ರೀತಿಯಲ್ಲಿ ಅವರೂ ಕೂಡ ಚರ್ಚೆ ಮಾಡಿದ್ದಾರೆ. ನಾನೂ ಕೂಡ ಹೋದ ವರ್ಷ ಆದಂತಹ ಘಟನೆ ಈ ವರ್ಷ ಆಗಬಾರದು ಎನ್ನುವ ದೃಷ್ಟಿಯಿಂದ ಈಗಾಗಲೇ ಪೆಚ್ಚು ಪ್ರಿಕಾಶನ್ ಅನ್ನು ನಾವು ತೆಗೆದುಕೊಂಡಿದ್ದೇವೆ. ನನಗೆ ಅನಿಸಿದ ಮಟ್ಟಿಗೆ ಈ ವರ್ಷ ಹೋದ ವರ್ಷ ಆದ ರೀತಿಯಲ್ಲಿ ಬಹುತೇಕ ಆ ಪರಿಸ್ಥಿತಿ ಆಗಲಿಕ್ಕಿಲ್ಲ. ಈಗ ಎಡಿಬಿ ಯೋಜನೆಯಲ್ಲಿ ಮೇಳಾಪುರ ಯೋಜನೆಯನ್ನು ಕೂಡ ಸದ್ಯದಲ್ಲಿ ಕಾರ್ಯಗತಗೊಳಿಸುತ್ತಿದ್ದೇವೆ. ಇದರಿಂದ ಯಾವುದೇ ರೀತಿಯಿಂದ ತೊಂದರೆ ಆಗದ ರೀತಿಯಲ್ಲಿ ಸರ್ಕಾರ ಬಹಳ ಮುಂಜಾಗ್ರತಾ ಕ್ರಮವನ್ನು ಕೂಡ ಕೈಗೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.